UASB
LIBRARY
Newspaper Clippings
Pg .1 Wednesday 17-03-2021 Jai Kisan



ಪಾರಂಪರಿಕ ಕೃಷಿ ಪದ್ಧತಿ ರಕ್ಷಿಸಿ | ರೈತರ ಆತ್ಮಹತ್ಯೆ ತಡೆಗೆ ಕ್ರಮ ಅವಶ್ಯ

ಸಾವಯವ ಕೃಷಿಗೆ ಹೆಚ್ಚಿನ ಒತ್ತು

- ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ
- ರೈತರಿಂದ ಗ್ರಾಹಕರಿಗೆ ಕೃಷಿ ಉತ್ಪನ್ನ
- ಕೃಷಿಗೆ ನೀರಾವರಿ ಪ್ರಮುಖವಾಗಿದೆ

ಸಂ.ಕ ಸಮಾಚಾರ ದೊಡ್ಡಬಳ್ಳಾಪುರ

ನಗರದ ಭಗತ್‌ಸಿಂಗ್ ಕ್ರೀಡಾಂಗಣ ಎದುರಿನ ಅಂಚೆ ಕಚೇರಿ ರಸ್ತೆಯಲ್ಲಿ ಸ್ವದೇಶಿ ಜಾಗರಣ ಮಂಚ್‌ನಿಂದ ಆಯೋಜಿಸಿದ್ದ ಸಾವಯವ ಸಂತೆಗೆ, ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಸಂತೆ ಉದ್ಘಾಟನೆ ಕಂಡ ಕೆಲವೇ ಕ್ಷಣಗಳಲ್ಲಿ ಉತ್ಪನ್ನಗಳು ಖಾಲಿಯಾಗುವ ಮೂಲಕ ಆಯೋಜಕರೇ ಆಶ್ಚರ್ಯಚಕಿತರಾಗುವಂತೆ ಮಾಡಿದ್ದರೆ, ಸಂತೆಗೆ ವಿಳಂಬವಾಗಿ ಬಂದ ಗ್ರಾಹಕರು ಉತ್ಪನ್ನಗಳು ದೊರಕದೆ ಬೇಸರದಿಂದ ಮನೆಗೆ ತೆರಳಿದರು.

ಸಂತೆ ಉದ್ಘಾಟಿಸಿ ಮಾತನಾಡಿದ ಪ್ರವಾಸೋದ್ಯಮ ಮತ್ತು ಪರಿಸರ, ಜೀವಿಶಾಸ್ತ್ರಜ್ಞ ಸಿ.ಪಿ.ಯೋಗೇಶ್ವರ್, ಆರೋಗ್ಯದ ದೃಷ್ಟಿಯಿಂದ ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡುವ ಅಗತ್ಯವಿದ್ದು, ಸಾವಯವ ಕೃಷಿ ಹೆಚ್ಚಾಗುವುದರಿಂದ ದುಬಾರಿ ಎನಿಸಿರುವ ಸಾವಯವ ಉತ್ಪನ್ನಗಳು ಎಲ್ಲರ ಕೈಗೆಟುಕುತ್ತವೆ ಎಂದು ಹೇಳಿದರು.

ವಾಣಿಜ್ಯೀಕರಣದಿಂದಾಗಿ ಇಂದು ನಮ್ಮ ಪಾರಂಪರಿಕ ಕೃಷಿ ಪದ್ಧತಿಗಳು ಮರೆಯಾಗುತ್ತಿವೆ. ಈಗ ಮತ್ತೆ ಅವುಗಳನ್ನು ಆಳವಡಿಸಿಕೊಳ್ಳಬೇಕಾದ ಸಂದರ್ಭ ಮತ್ತೆ ಬಂದಿದೆ. ತಮ್ಮ ಬಾಲ್ಯದಲ್ಲಿ ಹಲವಾರು ರೀತಿಯ ಸೊಪ್ಪು ತರಕಾರಿಗಳನ್ನು ಸೇವಿಸುತ್ತಿದ್ದುದನ್ನು ಸ್ಮರಿಸಿದ ಅವರು, ರೈತರಿಂದ ಗ್ರಾಹಕರಿಗೆ ಕೃಷಿ ಉತ್ಪನ್ನಗಳು ತಲುಪಲು ಸಂತೆಗಳು ಮಹತ್ವದ ಪಾತ್ರ ವಹಿಸಲಿದೆ. ಕೃಷಿಗೆ ನೀರಾವರಿ ಪ್ರಮುಖವಾಗಿದ್ದು, ಅಂತ ಜಲ ಕೊರತೆ ಇರುವ ಜಿಲ್ಲೆಗಳಿಗೆ ಸರ್ಕಾರ ನೀರಾವರಿ ಯೋಜನೆಗಳನ್ನು ನೀಡುವುದು ಸಹ ಸರ್ಕಾರದ ಕರ್ತವ್ಯವಾಗಿದೆ ಎಂದರು.


ಸ್ವದೇಶಿ ಸಾವಯವ ಸಂತೆಯನ್ನು ಸಚಿವ ಸಿ.ಪಿ.ಯೋಗೇಶ್ವರ್.ಉದ್ಘಾಟಿಸಿದರು.

ಸ್ವದೇಶಿ ಜಾಗರಣ ಮಂಚ್ ಜಿಲ್ಲಾ ಸಂಯೋಜಕ ಆಂಜಿನಪ್ಪ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಟಿ.ವಿ.ಲಕ್ಷ್ಮೀನಾರಾಯಣ್, ತಾಪಂ. ಮಾಜಿ ಅಧ್ಯಕ್ಷ ಅಶ್ವತ್ಥನಾರಾಯಣ್ ಕುಮಾರ್, ಕೃಷಿ ಇಲಾಖೆಯ ಜೆಂಟಿ ಕೃಷಿ ನಿರ್ದೇಶಕ ಜಯಸ್ವಾಮಿ, ಸಹಾಯಕ ಕೃಷಿ ನಿರ್ದೇಶಕಿ ಸುಶೀಲಮ್ಮ, ತಾಂತ್ರಿಕ ಅಧಿಕಾರಿ ರೂಪ, ತೋಟಗಾರಿಕೆ ನಿರ್ದೇಶಕ ಶ್ರೀನಿವಾಸ್, ಸ್ವದೇಶಿ ಜಾಗರಣ ಮಂಚ್‌ನ ಶ್ರೀನಿವಾಸ್, ಮುಖಂಡರಾದ ಮಲ್ಲಪ್ಪ, ವತ್ಸಲ, ರಾಮಕೃಷ್ಣ, ರಾಷ್ಟ್ರೋತ್ಥಾನ ಗೋಶಾಲೆಯ ಸಂಚಾಲಕ ಜೀವನ್ ಕುಮಾರ್, ಪ್ರಕಾಶ್ ರೆಡ್ಡಿ, ಶಿವಾನಂದರೆಡ್ಡಿ ಮತ್ತಿತರಿದ್ದರು.

17-03-2021 Sk Pg 04

ಹಣಗಳಿಸುವ ಆತುರದಲ್ಲಿ ರಾಸಾಯನಿಕ ಬಳಕೆ | ಹೊರರಾಜ್ಯದಲ್ಲಿ ಬೇಡಿಕೆ ಕುಸಿತ

ದುರಾಸೆಗೆ ಮಂಡ್ಯ ಬೆಲ್ಲಕ್ಕೆ ಕೆಟ್ಟ ಹೆಸರು

ದಿಗಂತ ವರದಿ, ಮಂಡ್ಯ

ಆತ್ಮನಿರ್ಭರ ಭಾರತ ಯೋಜನೆಯಲ್ಲಿ ಮಂಡ್ಯ ಜಿಲ್ಲೆಯನ್ನು ಬೆಲ್ಲ ತಯಾರಿಕೆಗಾಗಿ ಆಯ್ಕೆ ಮಾಡಲಾಗಿದೆ. ಆದರೆ, ಗುಣಮಟ್ಟದಿಂದ ಕೂಡಿಲ್ಲ ಎಂಬ ಕಾರಣಕ್ಕೆ ಹಲವು ರಾಜ್ಯಗಳು ತಿರಸ್ಕರಿಸಿರುವುದು ಯೋಜನೆಗೆ ಹಿನ್ನಡೆಯಾದಂತಾಗಿದೆ.

ಜಿಲ್ಲೆಯಲ್ಲಿ ಸುಮಾರು ನಾಲ್ಕೂವರೆ ಸಾವಿರಕ್ಕೂ ಹೆಚ್ಚು ಆಲೆಮನೆಗಳಿವೆ. ಆದರೆ, ಕೇವಲ 400ಕ್ಕಂತಲೂ ಕಡಿಮೆ ಪ್ರಮಾಣದ ಆಲೆಮನೆಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಉಳಿದವು ನಷ್ಟದ ಹಾದಿ ಹಿಡಿದು ಸ್ಥಗಿತಗೊಂಡಿವೆ. ಇದಕ್ಕೆ ಬೆಲ್ಲದ ಬೇಡಿಕೆ ಇಲ್ಲದಿರುವುದೇ ಕಾರಣವಾಗಿದೆ.

ಬೆಲ್ಲದ ಬಣ್ಣ ಬದಲಿಸಲು ರಾಸಾಯನಿಕ ಬಳಕೆ: ಮಂಡ್ಯ ಬೆಲ್ಲಕ್ಕೆ ಗುಜರಾತ್, ಹೈದರಾಬಾದ್, ಮುಂಬೈ, ಪುಣೆ, ಕೇರಳ, ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಲ್ಲಿ ಬೇಡಿಕೆ ಇತ್ತು. ನಿತ್ಯ ಗುಜರಾತ್, ಹೈದರಾಬದ್ ಮತ್ತಿತರೆಡೆಗಳಿಗೆ ಲಾರಿಗಳಲ್ಲಿ ಮಂಡ್ಯ ಬೆಲ್ಲವನ್ನು ಸಾಗಿಸಲಾಗುತ್ತಿತ್ತು.

ರಾಸಾಯನಿಕ ಮಿಶ್ರಣ-ಆತಂಕಕ್ಕೆ ಕಾರಣ : ಒಂದು ಆಲೆಮನೆಯಲ್ಲಿ ದಿನಕ್ಕೆ 5 ರಿಂದ 8 ಟನ್ ಬೆಲ್ಲ ಉತ್ಪಾದನೆ ಮಾಡಬಹುದಾಗಿದೆ. ಕಳಪೆ ಗುಣಮಟ್ಟದ ಸಕ್ಕರೆ, ರಾಸಾಯನಿಕ ಬೆರೆಸಿ ದಿನಕ್ಕೆ 15 ರಿಂದ 20 ಟನ್ ಬೆಲ್ಲ ತಯಾರಿಸಿ ದೂರದ ಪ್ರದೇಶಗಳಿಗೆ ಸಾಗಿಸುವ ದಂಧೆಗಿಳಿದಿದ್ದಾರೆ. ಇದರಿಂದಾಗಿ ಜಿಲ್ಲೆಗೆ ಕೆಟ್ಟ ಹೆಸರು ಬಂದಿದೆ.

ವಲಸೆ ಕಾರ್ಮಿಕರಿಂದ ಆನಾಹುತ : ಆಲೆಮನೆ ಮಾಲೀಕರು ಉತ್ತರ ಪ್ರದೇಶ, ಬಿಹಾರ ಸೇರಿದಂತೆ ಉತ್ತರ ಭಾರತದ ಕಾರ್ಮಿಕರನ್ನು ಕರೆತಂದು ಬೆಲ್ಲ ತಯಾರಿಕೆಗೆ ಗುತ್ತಿಗೆ ನೀಡುವರು. ಮಹಾರಾಷ್ಟ್ರದಲ್ಲಿ ಸಿಗುವ ಕಳಪೆ ಗುಣಮಟ್ಟದ ಸಕ್ಕರೆ ತಂದು ರಾಸಾಯನಿಕದೊಂದಿಗೆ ಕಳಪೆ ದರ್ಜೆ ಸಕ್ಕರೆ ಮಿಶ್ರಣ ಮಾಡುವರು. ನೋಡಲು ತುಂಬಾ ಚೆನ್ನಾಗಿ ಕಾಣುವುದು. ಆದರೆ, ಈ ಬೆಲ್ಲ ತಿನ್ನಲು ಯೋಗ್ಯವಲ್ಲ ಎಂದು ಪ್ರಯೋಗಾಲಯದ ವರದಿಯಲ್ಲಿ ತಿಳಿದುಬಂದಿದೆ.


ತಿನ್ನಲು ಯೋಗ್ಯವಲ್ಲ ಎಂದ ಪ್ರಯೋಗಾಲಯ ವರದಿ

ಎಪಿಎಂಸಿಯಿಂದ ತರಬೇತಿ : ಉತ್ತಮ ಗುಣಮಟ್ಟದ ಬೆಲ್ಲ ತಯಾರಿಕೆಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಗಾಣದ ಮಾಲೀಕರು, ಕಾರ್ಮಿಕರಿಗೆ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡುತ್ತಿದೆ. ಯುಪಿ ಕಾರ್ಮಿಕರಿಂದಾಗಿ ಈ ರೀತಿಯ ವಾತಾವರಣ ಕಂಡುಬರುತ್ತಿದೆ ಎಂಬುದು ಎಪಿಎಂಸಿ ಅಧಿಕಾರಿ ಅಭಿಪ್ರಾಯ.

ಒಂದು ಕಾಲದಲ್ಲಿ ಮಂಡ್ಯ ಬೆಲ್ಲ ಎಂದರೆ ಮಾರುಕಟ್ಟೆಯಲ್ಲಿ ಬೇಡಿಕೆ ಇತ್ತು. ರಾಸಾಯನಿಕ, ಮಣ್ಣು ಮಿಶ್ರಿತದಿಂದಾಗಿ ಬೆಲ್ಲ ತಿರಸ್ಕೃತಗೊಂಡಿರುವುದು ಉದ್ದಿಮೆ ಮೇಲೆ ಪರಿಣಾಮ ಬೀರಿದೆ.

> ಕಳಪೆ ಗುಣಮಟ್ಟದ ಬೆಲ್ಲ ತಯಾರಿಕೆ ಮಾಹಿತಿ ಬಂದ ತಕ್ಷಣ ಆಲೆಮನೆ ಮಾಲೀಕರು, ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ. ರಾಸಾಯನಿಕ ಮಿಶ್ರಿತ ಬೆಲ್ಲ ತಯಾರಿಸುವವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ.
> ■ ಎಸ್. ಅಶ್ವಥಿ, ಜಿಲ್ಲಾಧಿಕಾರಿ, ಮಂಡ್ಯ

> ಎಪಿಎಂಸಿಯಿಂದ ಗುಣಮಟ್ಟದ ಬೆಲ್ಲ ತಯಾರಿಕೆ, ಮಾರುಕಟ್ಟೆ ವಿಸ್ತರಣೆ, ಬ್ರಾಂಡೆಂಡ್ ನೇಮ್ ಕುರಿತು ಹಲವಾರು ಕಾರ್ಯಕ್ರಮ ಮಾಡಲಾಗಿದೆ. ಪರವಾನಗಿ ರದ್ದುಪಡಿಸಿ ಕಾನೂನು ಕ್ರಮ ಕೈಗೊಳ್ಳುವುದರ ಕುರಿತು ಚಿಂತನೆ ನಡೆಸಲಾಗಿದೆ.
> ■ ನಂಜುಂಡಸ್ವಾಮಿ, ಕಾರ್ಯದರ್ಶಿ, ಎಪಿಎಂಸಿ

> ಆಲೆಮನೆಯಲ್ಲಿ ಉತ್ಪಾದನೆಯಾಗುವ ಬೆಲ್ಲದ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ನಂತರ ಸತ್ಯಾಂಶ ಬೆಳಕಿಗೆ ಬರುವುದು.
> ■ ಡಾ. ಬೆಟ್ಟಸ್ವಾಮಿ, ಸರ್ವೇಕ್ಷಣಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

17-03-2021 Hd Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in

UASB LIBRARY
Newspaper Clippings
Pg .2 Wednesday 17-03-2021 Jai Kisan



ಕಬ್ಬು ಬೆಳೆಯಲ್ಲಿ ನೀರು ನಿರ್ವಹಣೆ

ಬೇಸಿಗೆ ಕಾಲದಲ್ಲಿ ಕಬ್ಬು ಬೆಳೆಗೆ ನೀರು ನಿರ್ವಹಣೆ ಕೈಕಟ್ಟಿಗೆ ಸಮಾನವಾಗಿ ಪರಿಣಮಿಸಿದೆ. ಸೂಕ್ತವಾದ ಕ್ರಮಗಳನ್ನು ಕೈಗೊಂಡು ಉತ್ತಮ ಇಳುವರಿ ಪಡೆಯಬಹುದಾಗಿದೆ.

ಕಬ್ಬು ನಾಟಿ ಮಾಡುವ ಮೊದಲಲ್ಲಿ ಹೊಸದಲ್ಲಿ ಗೊಬ್ಬರಗಳನ್ನು ಬಳಸಬೇಕು. ಇದರಿಂದ ಮಣ್ಣಿನಲ್ಲಿ ಸಾವಯವ ಇಂಗಾಲ ಉಚಿತವಾಗಿ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಉಳಿಯುತ್ತದೆ. ಕಬ್ಬು ನಾಟಿ ಮಾಡಿದ ಮೊದಲಲ್ಲಿ ಹಾಗೂ ಕಬ್ಬಿನಲ್ಲಿ ಪ್ರತಿ ಎಕರೆಗೆ ಗೊಬ್ಬರ ಹಾಗೂ 1 ಟನ್ ಎರೆಹುಳು ಗೊಬ್ಬರ ಹಾಕಬೇಕು. ನೀರಿನ ಕೊರತೆಯಿರುವ ಪ್ರದೇಶದಲ್ಲಿ ಪಟ್ಟಾ ಪದ್ಧತಿಯಲ್ಲಿ ಅಂದರೆ 2.5-5-2.5 ಅಡಿ ಅಥವಾ 3'-6'-3' ಅಂತರದಲ್ಲಿ ನಾಟಿ ಮಾಡಬೇಕು. ನಾಟಿ ಮಾಡುವ ಸಂದರ್ಭದಲ್ಲಿ ಸುಣ್ಣದ ತಿಳಿ ನೀರಿನಲ್ಲಿ ಕಬ್ಬಿನ ಬೀಜಗಳನ್ನು 10-15 ನಿಮಿಷ ನೆನೆಯಿಸಿ ನಂತರ ನಾಟಿ ಮಾಡಬೇಕು.

ಗಣಕೆಯೂರಾವತನಕ(ಮೂರು ತಿಂಗಳು) ಸಾಲುಗಳ ಮಧ್ಯದಲ್ಲಿ ಮೇಲಿಂದ ಮೇಲೆ ಎಡೆಕುಂಟೆ ಹೊಡೆಯುವುದರಿಂದ ಮಣ್ಣಿನಲ್ಲಿರುವ ತೇವಾಂಶ ಸಂರಕ್ಷಿಸಲ್ಪಡುತ್ತದೆ. ಇದರಿಂದ ನೀರು ಕೊಡುವ ಅವಧಿಯ ಅಂತರ ಹೆಚ್ಚಿಸಿಕೊಳ್ಳಬಹುದು. ಸಂಪೂರ್ಣವಾಗಿ ಒಣಗಿದ ಕಬ್ಬಿನ ಎಲೆಗಳನ್ನು ಸುಲಿದು ಸಾಲುಗಳ ಮಧ್ಯ ಹೊದಿಕೆ(ಆಚ್ಛಾದನೆ) ಮಾಡುತ್ತಿರಬೇಕು. ಇದರಿಂದ ಮಣ್ಣಿನಲ್ಲಿರುವ ತೇವಾಂಶ ಕಾಪಾಡಿಕೊಳ್ಳಬಹುದು.ಕಬ್ಬು ಕಟಾವು ಮಾಡಿದ ತಕ್ಷಣ (ಕುಳೆ ಬೆಳೆಯಲ್ಲಿ) ಕಬ್ಬಿನ ರವದಿ ಹಾಗೂ ಸೋಗೆಗಳನ್ನು ಕಬ್ಬಿನ ಒಂದು ಸಾಲು ಬಿಟ್ಟು ಇನ್ನೊಂದು ಸಾಲುಗಳಲ್ಲಿ ಹೊದಿಕೆ(ಆಚ್ಛಾದನೆ) ಮಾಡುವುದರಿಂದ ಶೇ.30 ರಿಂದ 40ರಷ್ಟು ನೀರು ಉಳಕಾಯ ಮಾಡಬಹುದು.

ಕಾಲುವೆ ನೀರಾವರಿ ಪದ್ಧತಿ ಇದ್ದಲ್ಲಿ ರವದಿ ಹೊದಿಕೆ (ಆಚ್ಛಾದನೆ) ಮಾಡಲಾದ ಸಾಲುಗಳಲ್ಲಿ ಮಾತ್ರ ನೀರನ್ನು ಹಾಯಿಸುವುದರಿಂದ ನೀರಿನ ಬಳಕೆಯನ್ನು ಕಡಿಮೆ ಮಾಡಬಹುದಾಗಿದೆ. ಕಳೆಗಳನ್ನು ಕಿತ್ತು ಹೊದಿಗೆ ಹಾಕುವ ಬದಲಾಗಿ ಸಾಲುಗಳಲ್ಲಿ ಹಾಕಬೇಕು. ಈ ಕಳೆಗಳು ಹಸಿಯಾಗಿರುವುದರಿಂದ ಕಬ್ಬು ಬೆಳೆಗೆ ಹೆಚ್ಚುವರಿ ಪೋಷಕಾಂಶಗಳು ಲಭಿಸುತ್ತವೆ.

ಸೂಕ್ಷ್ಮಾಣು ಜೀವಿ ಬಳಕೆ

ರವದಿ ನಿರ್ವಹಣೆಗಾಗಿ ಪ್ರತಿ ಎಕರೆಗೆ ಐದು ಕೆ.ಜಿ ರವದಿ ಕಳೆಯುವ ಸೂಕ್ಷ್ಮಾಣು ಜೀವಿಗಳಾದ "ಟ್ರೈಕೋಡರ್ಮಾ" ಜಾತಿಯ ಜೀವಿಗಳನ್ನು ಹತ್ತು ಕೆ.ಜಿ ಪಿಪ್ಪೆ ಗೊಬ್ಬರದಲ್ಲಿ ಮಿಶ್ರಣ ಮಾಡಿ ಬಳಸಬೇಕು. ಹಾಗೂ "ಫಿನೋರೀಚೇಟ್" ಸೂಕ್ಷ್ಮಾಣುಜೀವಿಗಳನ್ನು ರವದಿಯಲ್ಲಿ ಬಳಸಬೇಕು. ಇದರಿಂದ ರವದಿ ಬೇಗನೆ ಕೆಳೆತು ಸಾವಯವ ಗೊಬ್ಬರವಾಗಿ ಪರಿವರ್ತನೆಯಾಗಿ ಜಮೀನಿನಲ್ಲಿ ಸದಾಕಾಲ ಸಾವಯವ ಇಂಗಾಲ ಹಾಗೂ ತೇವಾಂಶ ಲಭಿಸುತ್ತದೆ. ಇದರಿಂದ ಕಬ್ಬು ಬೆಳೆಯೂ ಆರೋಗ್ಯಕರ ಬೆಳವಣಿಗೆಯನ್ನು ಹೊಂದುತ್ತದೆ.

ನೀರಿನ ಆಭಾವ ಪರಿಸ್ಥಿತಿಯಲ್ಲಿ ಶಿಫಾರಸ್ಸು ಪ್ರಮಾಣಕ್ಕಿಂತ ಹೆಚ್ಚಿಗೆ, ಅಂದರೆ ಪ್ರತಿ ಎಕರೆಗೆ ಅಂದಾಜು 20 ಕೆ.ಜಿ. ಮ್ಯುರೇಟ್ ಆಫ್ ಪೊಟ್ಯಾಷ್(ಎಮ್ಓಪಿ) ಗೊಬ್ಬರವನ್ನು ಮರ್ಚ್ ತಿಂಗಳಲ್ಲಿ ಕಬ್ಬು ಬೆಳೆಗೆ ಉಪಯೋಗಿಸಬೇಕು.

ಪ್ರತಿ ಲೀಟರ್ ನೀರಿನಲ್ಲಿ 25 ಗ್ರಾಂನಂತೆ ಪೋಟ್ಯಾಷ್(ಎಮ್ಓಪಿ) ಗೊಬ್ಬರ ಮಿಶ್ರಣ ಮಾಡಿದ ದ್ರಾವಣವನ್ನು ಪ್ರತಿ ಎಕರೆಗೆ 150 ರಿಂದ 250 ಲೀಟರ್‌ನಂತೆ ಸಿಂಪರಣೆ ಮಾಡಬೇಕು. ಇದರಿಂದ ಕಬ್ಬಿನ ಎಲೆಗಳಲ್ಲಿನ ರಂಧ್ರಗಳ ಮುಖಾಂತರ ಆವಿಯಾಗುವ ತೇವಾಂಶವನ್ನು ತಡೆಗಟ್ಟಬಹುದಾಗಿದೆ. ಈ ಸಿಂಪರಣಾ ಕ್ರಮವನ್ನು ಮೇಲಿಂದ ಮೇಲೆ ಅನುಸರಿಸುವುದು ಆವಾಯಕರ, ಕಾರಣ ಈ ದ್ರಾವಣವನ್ನು ಮೇಲಿಂದ ಮೇಲೆ ಸಿಪರಣೆ ಮಾಡುವುದರಿಂದ ಎಲೆಗಳಲ್ಲಿರುವ ಆಸ್ಮಂತ ಸೂಕ್ಷ್ಮ ರಂಧ್ರಗಳು ಸಂಪೂರ್ಣ ಮುಚ್ಚುವುದರಿಂದ ಬೆಳಿಗೆ ಉಸಿರಾಟದ ತೊಂದರೆಯಾಗಿ ಒಣಗುವ ಸಂಭವನೀಯತೆ. ಆದ್ದರಿಂದ ಈ ದ್ರಾವಣವನ್ನು 10 ರಿಂದ 15 ದಿನಕ್ಕೊಮ್ಮೆ ಬೆಳೆಯ ಬೆಳವಣಿಗೆಯ ಪರಿಸ್ಥಿತಿಯನ್ನು ಗಮನಿಸಿ ಸಿಂಪಡಿಸಬೇಕು. ನೀರಿನ ಕೊರತೆಯಲ್ಲಿ ಬೆಳೆಯಿಂದ ಸಾಮರ್ಥ್ಯವೃದ್ಧಿಸಿರಿ 671, ಸಿಒಎಸ್‌ಎನ್‌ಇ 0632 ಮತ್ತು ಸಿಒ 94012 ತಳಗಳನ್ನು ನಾಟಿ ಮಾಡಬೇಕು.

■ ಬಸವರಾಜ ಗಿರಗಾಂವಿ





ಸೋಲಾರ್ ಸ್ವಾವಲಂಬನೆ ಮಂತ್ರಕ್ಕಿಂತ ಉಗುಳು ಜಾಸ್ತಿ

- ಸೋಲಾರ್ ಉತ್ಪನ್ನಗಳ ಉತ್ಪಾದನೆ
- ಆಮದಿನ ಮೇಲೆ ಅವಲಂಬನೆ
- ಸರಕಾರದ ನೀತಿ ಸ್ಪಷ್ಟವಾಗಿಲ್ಲ



ಸೋಲಾರ್‌ಗೆ ಸಂಬಂಧಿಸಿದಂತೆ ಸರಕಾರದ ನೀತಿಯಲ್ಲೇ ಸ್ಪಷ್ಟತೆ ಇಲ್ಲ. ಉತ್ಪಾದಕರಿಗೆ ಪ್ಯಾಕೇಜ್‌ನ ಅನುದಾನ ಹಂಚಿಕೆ ಹೇಗೆ ಮತ್ತು ಯಾವಾಗ ಎಂಬುದು ಗೊತ್ತಾಗುತ್ತಿಲ್ಲ. ಈ ಹಿಂದೆ ಮಿಸಲಿಟ್ಟ ಪ್ರೋತ್ಸಾಹಧನದ ಹಣ ಕೂಡ ಬಂದಿಲ್ಲ. ಸರಕಾರ ಸಮರ್ಪಕವಾದ ನೀತಿಯನ್ನು ತಳೆಯುವವರೆಗೂ ಸೋಲಾರ್ ಕ್ಷೇತ್ರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹರಿದುಬರುವ ಸಾಧ್ಯತೆ ಕಡಿಮೆ ಎಂದು ಸೋಲಾರ್ ಉದ್ಯಮದ ತಜ್ಞರು ಹೇಳುತ್ತಾರೆ.

ಸೋಲಾರ್ ವಿದ್ಯುತ್ ಹಾಗೂ ಉತ್ಪನ್ನಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಬೇಕೆನ್ನುವುದು ಸರಕಾರದ ಹಂಬಲ. ದೇಶೀಯ ಕಂಪನಿಗಳು ಕೂಡ ಸ್ವಳೀಯವಾಗಿಯೇ ಸೋಲಾರ್ ಸೆಲ್ ಮತ್ತು ಸಂಬಂಧಿತ ಉತ್ಪನ್ನಗಳನ್ನು ಉತ್ಪಾದಿಸಲು ಉತ್ಸುಕವಾಗಿವೆ. ಆದರೆ ಸ್ವಾವಲಂಬನೆಯ ಹಾದಿಯಲ್ಲಿರುವ ಕಲ್ಲುಮುಳ್ಳುಗಳನ್ನು ನಿವಾರಿಸಿಕೊಂಡು ಮುನ್ನಡೆಯುವ ಪ್ರಯತ್ನ ನಡೆದಿದೆಯೇ...?

ಇಂದು ಸೋಲಾರ್ ಉತ್ಪನ್ನಗಳ ತಯಾರಿಕೆ ವಿಷಯದಲ್ಲಿ ಚೀನಾ ಮುಂಚೂಣಿಯಲ್ಲಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಕೇವಲ ಸಬ್ಸಿಡಿಯಲ್ಲಿ ಮಾತ್ರವಲ್ಲ ಗುಣಮಟ್ಟವನ್ನೂ ಕಾಯ್ದುಕೊಂಡು ಅಗ್ಗಗಳನ್ನು ಕೈಗೆಟುಕುವ ದರದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಚೀನಾ ಸಿದ್ಧಪಡಿಸಿದೆ. ಆದರೆ ಭಾರತದ ವಿಷಯದಲ್ಲಿ ಹಾಗಿಲ್ಲ. ಸೋಲಾರ್ ವಿಷಯದಲ್ಲಿ ಇದುವರೆಗೆ ಘೋಷಣೆಯಾಗಿದ್ದೆಲ್ಲ ಕೇವಲ ಕಾಗದದಲ್ಲಿದ್ದಲ್ಲೇ ಮೊಳಕೆ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಕೆಲವು ಕಂಪನಿಗಳು ಉತ್ಪಾದಿಸಿದ ಸೋಲಾರ್ ವಿದ್ಯುತ್‌ನ್ನು ಯೋಗ್ಯ ದರ ಕೊಟ್ಟು ಖರೀದಿಸುವಲ್ಲಿ ಸರಕಾರಿ ವಿದ್ಯುತ್ ವಿತರಣಾ ಕಂಪನಿಗಳು ಹಿಂದೇಟು ಹಾಕುತ್ತಿರುವ ಬಗ್ಗೆ ಮೊದಲಿನಿಂದಲೂ ಆರೋಪ ಕೇಳಿಬರುತ್ತಲೇ ಇದೆ. ಹೀಗಾಗಿ ಈ ಕ್ಷೇತ್ರದಲ್ಲಿ ಖಾಸಗಿ ಬಂಡವಾಳ ಹೂಡಿಕೆ ತೃಪ್ತಿಕರವಾಗಿಲ್ಲ. ಈ ವಿಷಯದಲ್ಲಿ ಸರಕಾರ ಏನೇ ಹೊಸ್ತಾಪ ನೀಡಿದರೂ ಸ್ವಾವಲಂಬನೆಯ ಕನಸು ನನಸಾಗಲು ನಾವು ಇನ್ನೂ ಬಹುದೂರ ಕ್ರಮಿಸಬೇಕಿದೆ.

ಸದ್ಯಕ್ಕೆ ಭಾರತ ಮೂರು ಗಿಗಾವಾಟ್ ಸಾಮರ್ಥ್ಯದ ಸೋಲಾರ್ ಸೆಲ್(ಕೋಶ) ಹಾಗೂ 10 ಗಿಗಾವಾಟ್ ಸಾಮರ್ಥ್ಯದ ಮಾಡ್ಯೂಲ್‌ಗಳನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ ಎನ್ನಲಾಗುತ್ತಿದೆ. ಆದರೆ ಇದು ಪೂರ್ಣಪ್ರಮಾಣದಲ್ಲಿ ಕಾರ್ಯಗತಗೊಂಡಿಲ್ಲ ಎಂಬುದು ಈಕ್ಷೇತ್ರದತಜ್ಞರ ಅಂಬೋಣ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಚೀನಾ 174 ಗಿಗಾವ್ಯಾಟ್ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದೆ. ಮೂಲ ಕಚ್ಚಾವಸ್ತುವಾದ ಪಾಲಿಸಿಲಿಕಾನ್‌ಕೂಡ ಚೀನಾದಲ್ಲೇ ದಂಡಿಯಾಗಿ ಸಿಗುತ್ತದೆ. ಹೀಗಾಗಿ ಸೋಲಾರ್ ವಿದ್ಯುತ್ ಹಾಗೂ ಉಷ್ಣಕಾರಣಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವಲ್ಲಿ ಚೀನಾ ಸಕ್ಷಮವಾಗಿದೆ.

ಸ್ಪಷ್ಟತೆ ಇಲ್ಲ

ಇಲ್ಲಿ ವಿಷಾದದ ಸಂಗತಿ ಏನೆಂದರೆ ಸೋಲಾರ್‌ಗೆ ಸಬಂಧಿಸಿದಂತೆ ಸರಕಾರದ ನೀತಿಯಲ್ಲೇ ಸ್ಪಷ್ಟತೆ ಇಲ್ಲ. ಉತ್ಪಾದಕರಿಗೆ ಪ್ಯಾಕೇಜ್‌ನ ಅನುದಾನ ಹಂಚಿಕೆ ಹೇಗೆ ಮತ್ತು ಯಾವಾಗ ಎಂಬುದು ಗೊತ್ತಾಗುತ್ತಿಲ್ಲ. ಈ ಹಿಂದೆ ಮೀಸಲಿಟ್ಟ ಪ್ರೋತ್ಸಾಹಧನದ ಹಣ ಕೂಡ ಬಂದಿಲ್ಲ. ಸರಕಾರ ಸಮರ್ಪಕವಾದ ನೀತಿಯನ್ನು ತಳೆಯುವವರೆಗೂ ಸೋಲಾರ್ ಕ್ಷೇತ್ರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹರಿದುಬರುವ ಸಾಧ್ಯತೆ ಕಡಿಮೆ ಎಂದು ಸೋಲಾರ್ ಉದ್ಯಮದ ತಜ್ಞರು ಹೇಳುತ್ತಾರೆ. ಇನ್ನು ಸೋಲಾರ್ ಉತ್ಪನ್ನಗಳ ಮೇಲಿನ ಆಮದು ಸುಂಕ ಹಾಗೂ ಆದರ ಅವಧಿಯ ಬಗ್ಗೆಯೂ ಸ್ಪಷ್ಟ ನಿಲುವಿಲ್ಲ. ಸದ್ಯಕ್ಕೆ ಸೋಲಾರ್ ಫಲಕಗಳ ಮೇಲೆ ಶೇ.25 ಹಾಗೂ ಮಾಡ್ಯೂಲ್‌ಗಳ(ಫ್ರೇಮ್, ಗ್ಲಾಸ್, ಇಪಿಎ ಮತ್ತು ಕನೆಕ್ಟರ್) ಮೇಲೆ ಶೇ.40ರಷ್ಟು ಆಮದು ಸುಂಕ ವಿಧಿಸಲಾಗುತ್ತಿದೆ. ಇದು ಎ.1, 2022ರಿದ ಜಾರಿಗೆ ಬರಲಿದೆ. ಸ್ಥಳೀಯ ಮಾರಿಯೇ ಸೋಲಾರ್ ಉತ್ಪನ್ನಗಳ ತಯಾರಿಕೆಗೆ ಉತ್ತೇಜನ ನೀಡಲು ಕೇಂದ್ರ ಸರಕಾರ ಕ್ರಮ ಕೈಗೊಂಡಿದೆ. 2022ರ ವೇಳೆಗೆ 100 ಗಿಗಾವಾಟ್ ಉತ್ಪಾದನಾ ಸಾಮರ್ಥ್ಯ ಹೊಂದುವ ಗುರಿಯನ್ನು ಸರಕಾರ ಇರಿಸಿಕೊಂಡಿದೆ.

ಸದ್ಯಕ್ಕೆ ಭಾರತ ಆಮದಿನ ಮೇಲೆ ಜಾಸ್ತಿಯಾ ಅವಲಂಬಿದೆ. ಚೀನಾ, ಮಲೇಶಿಯಾದಿಂದ 2.16 ಶತಕೋಟಿ ಡಾಲರ್ ಮೌಲ್ಯದ ಸೋಲಾರ್ ಪಿವಿ ಸೆಲ್, ಮಾಡ್ಯೂಲ್‌ಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಸರಕಾರ ಸೋಲಾರ್ ವಿಷಯದಲ್ಲಿ ಸ್ಪಷ್ಟವಾದ ನೀತಿಯನ್ನು ರೂಪಿಸಿದರೆ ಎಲ್ಲ ಉತ್ಪನ್ನಗಳನ್ನು ಸ್ಥಳೀಯವಾಗಿಯೇ ಉತ್ಪಾದಿಸಲು ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಮಂತ್ರಕ್ಕಿಂತ ಉಗುಳು ಜಾಸ್ತಿಯಾದರೆ ಆಗುವುದೇ ಹೀಗೆ.

17-03-2021 Sk Pg 11



ವೀಳ್ಯದೆಲೆಯಿಂದ ಲಕ್ಷ್ಮೀ ಕಟಾಕ್ಷ



ವೀಳ್ಯದೆಲೆ ಎಂದರೆ ನೆನಪಾಗುವದು ತಾಂಬೂಲ, ಎಲ್ಲಾ ಶುಭಸಮಾರಂಭಗಳಲ್ಲಿ ಹೆಚ್ಚು ಬಳಸುವ ಎಲೆ. ಇತ್ತೀಚಿನ ವರ್ಷಗಳಲ್ಲಿ ವೀಳ್ಯದೆಲೆ ಬೆಳೆದವರ ಭಾಗ್ಯದ ಬಾಗಿಲು ತೆರೆಯುತ್ತಿದೆ. ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲೂಕಿನ ಮಮಟಗೇರಿ ಗ್ರಾಮದ ಯುವಕ ಚೆಂದಪ್ಪ ಸಾವಯವ ಗೊಬ್ಬರ ಬಳಸಿ ವೀಳ್ಯದೆಲೆ ಕೃಷಿ ಮಾಡುವ ಮೂಲಕ ಉತ್ತಮ ಆದಾಯಗಳಿಸುತ್ತಿದ್ದಾರೆ.

ತಮ್ಮ ಮೂರು ಎಕರೆಯಲ್ಲಿನ ಎಲೆಬಳ್ಳಿ ತೋಟವನ್ನು ಜತನದಿಂದ ಪೋಷಿಸುತ್ತಿದ್ದಾರೆ. ಇವರಿಗೆ ವೀಳ್ಯದೆಲೆ ಕೃಷಿಯ ಮೇಲೆ ವಿಶೇಷ ಒಲವು. ಇದರಲ್ಲಿ ಎರಡು ದಶಕಗಳ ಅನುಭವವಿದೆ. ಎರಡು ದಶಕಗಳ ಹಿಂದೆ ಆಂಧ್ರಪ್ರದೇಶದ ರಘುರೆಡ್ಡಿಯವರು ಇವರ ಜಮೀನಿನಲ್ಲಿರುವೇ ವೀಳ್ಯದೆಲೆ ಕೃಷಿ ಮಾಡುತ್ತಿದ್ದರು. ಅವರಿಂದ ಪ್ರೇರಿತವಾಗಿದ್ದಾರೆ. ಆರಂಭಿಕ ಹಂತದಲ್ಲಿ ಜಮೀನನ್ನು ಹದಗೊಳಿಸಿ ನಾಲ್ಕು ಅಡಿಗಳ ಅಂತರದಲ್ಲಿ ಸಾಲಾಗಿ ನುಗ್ಗೆ ಚೊಗಚೆ ನಿಡದ ಬೀಜ ಹಾಕಿದ್ದಾರೆ. ಇದು ಹುಟ್ಟಿ ನಾಲ್ಕು ಅಡಿ ಎತ್ತರ ಬೆಳೆದ ಮೇಲೆ ಅದರ ಬುಡದಲ್ಲಿ ಕೂಡಿಗಿ ಜವಾರಿ ಹಬ್ಬುಗಳನ್ನು ನಾಟಿ ಮಾಡಿದ್ದಾರೆ. ಹೀಗೆ ಗಿಡದ ಆಧಾರ ನೀಡಿದರೆ ವೀಳ್ಯದೆಲೆಯ ಬಳ್ಳಿಗೆ ಪ್ರತ್ಯೇಕವಾಗಿ ಕಾಡು ಕಡಿದು ಗೂಟ ನೆಡುವ ಅಗತ್ಯವಿಲ್ಲ. ನುಗ್ಗೆಯ ಗಿಡಗಳಿಂದ ಬಲಿತ ಎಲೆಗಳನ್ನು ಕತ್ತರಿಸಿ ಜಾನುವಾರುಗಳಿಗೆ ಮೇವನ್ನಾಗಿ ಬಳಸಬಹುದು.

ನಾಟಿ ವಿಧಾನ

ಮಳೆಗಾಲದಲ್ಲೇ ವೀಳ್ಯದೆಲೆ ಹಂಬು ನಾಟಿಗೆ ಸೂಕ್ತ ಕಾಲ ಎನ್ನುತ್ತಾರೆ ಚೆಂದಪ್ಪ. ಸಾಲಿನಿಂದ ಸಾಲಿಗೆ ನಾಲ್ಕು ಅಡಿ, ಬಳ್ಳಿಯಿಂದ ಬಳ್ಳಿಗೆ ಒಂದೂವರೆ ಅಡಿ ಅಂತರವಿದೆ. ಚಿಗುರೊಡೆಯುವ ಹತ್ತದಲ್ಲಿ ಕೊಟ್ಟಿಗೆಯ ಗೊಬ್ಬರ ನೀಡಿ ಬಳ್ಳಿಗೆ ಬುಡಕ್ಕೆ ಮಣ್ಣಿನಿಂದ ಏರು ಹಾಕಿದ್ದಾರೆ. ಹೀಗೆ ವರ್ಷಕ್ಕೆ ಎರಡು ಸಲದಂತೆ ಒಟ್ಟು 60 ಟ್ರಾಕ್ಟರ್‌ದಷ್ಟು ಸಾವಯವ ಗೊಬ್ಬರವನ್ನು ಜಮೀನಿಗೆ ಪೂರೈಸಿದ್ದಾರೆ. ಎರಡು ವರ್ಷಗಳ ಹಿಂದೆ ಜಮೀನನಲ್ಲಿ ಒಂದು ಬೋರ್‌ವೆಲ್ ಕೊರೆಸಿದ್ದಾರೆ. ಕಾಲುವೆಗಳ ಮುಖಾಂತರ ವಾರಕ್ಕೆ ಎರಡು ಸಲದಂತೆ ನೀರು ಹಾಯಿಸುತ್ತಾರೆ. ಹೀಗೆ ನೀರು ಬಿಡುವದರಿಂದ ತೇವಾಂಶ ಭೂಮಿಯಲ್ಲಿ ಹಾಗೆ ಉಳಿದು ವೀಳ್ಯದೆಲೆ ಬಳ್ಳಿ ಉತ್ತಮವಾಗಿ ಬರುತ್ತದೆ.

ಎಂಟನೆಯ ತಿಂಗಳಲ್ಲೇ ಗಿಡವನ್ನು ಆಧರಿಸಿ ಕವಲು ಕವಲಾಗಿ ಬೆಳೆಯುವ ಬಳ್ಳಿಯಲ್ಲಿ ತೆಳು ಹಸಿರಾದ ವೀಳ್ಯದೆಲೆಗಳು ಲಕಲಕಹೊಳೆಯುತ್ತಿವೆ. ಒಂದು ಬಳ್ಳಿ ಪ್ರತಿ ತಿಂಗಳು 200 ಎಲೆಗಳನ್ನು ನೀಡುತ್ತದೆ. ಇವರ ತೋಟದಲ್ಲಿ ಒಟ್ಟು ಹದಿನೆಂಟು ಸಾವಿರ ಎಲೆಬಳ್ಳಿಗಳಿವೆ. ಅತ್ಯಧಿಕ ಬೇಡಿಕೆ ಇರುವ ಕೂಡಿಗಿ ಜವಾರಿ ಜಾತಿಯ ವೀಳ್ಯದೆಲೆಯಾದುದರಿಂದ ಮಾರುಕಟ್ಟೆಯ ಸಮಸ್ಯೆಯಾಗಿಲ್ಲ.

ಉತ್ತಮ ಆದಾಯ

6 ಸಾವಿರ ಎಲೆಗಳ ಒಂದು ಕಟ್ಟು ಮಾಡಿದರೆ ಒಂದು ಬುಟ್ಟಿ ಎನ್ನುವ ಲೆಕ್ಕ. ಬೇಸಿಗೆಯಲ್ಲಿ 8 ರಿಂದ 10 ಬುಟ್ಟಿಗಳು, ಮಳೆಗಾಲದಲ್ಲಿ ಹಾಗೂ ಚಳಿಗಾಲದಲ್ಲಿ 15 ರಿಂದ 20 ಬುಟ್ಟಿಗಳು ದೊರಕುತ್ತವೆ. ಇಂಥ ಒಂದು ಬುಟ್ಟಿಗೆ ಕನಿಷ್ಠ 700 ರಿಂದ ಗರಿಷ್ಠ 3500 ರೂಪಾಯಿಗಳ ಬೆಲೆಯೂ ಸಿಕ್ಕಿದೆ. ವ್ಯಾಪಾರಭವಲ್ಲಿ ಎಲೆಬಳ್ಳಿ ಕೃಷಿಗೆ ಒಂದೂವರೆ ಲಕ್ಷ ರೂಪಾಯಿಗಳಷ್ಟು ಮೆಚ್ಚ ಮಾಡಿದ್ದಾರೆ. ತೋಟದಲ್ಲಿ ದಿನಾಲು 15 ಜನರಿಗೆ ಕೆಲಸ ನೀಡಿದ್ದಾರೆ. ವೀಳ್ಯದೆಲೆ ಬುಟ್ಟಿಗಳನ್ನು ತಾವೇಸ್ವತಃ ಮಾರುಕಟ್ಟೆಗಳಿಗೆ ಸಾಗಿಸುತ್ತಾರೆ. ಚೆಂದಪ್ಪ ಅವರು ಬಾಗಲಕೋಟೆ, ಜೊಗಚಗುಡ್ಡ, ವಿಜಯಪುರ ಮತ್ತು ಮಹಾರಾಷ್ಟ್ರಗಳಿಗೆ ವೀಳ್ಯದೆಲೆ ಬುಟ್ಟಿಗಳನ್ನು ಸಾಗಿಸುತ್ತಾರೆ. ಹೀಗಾಗಿ ಎಲ್ಲಬಿರ್ಚುಗಳನ್ನು ತೆಗೆದು ಪ್ರತಿ ತಿಂಗಳು ರೂ.1 ಲಕ್ಷ ಆದಾಯಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಚೆಂದಪ್ಪನ ಪ್ರಕಾರ ಇತರೆಲ್ಲ ಕೃಷಿಗಳಿಗೆ ಹೋಲಿಸಿದರೆ ವೀಳ್ಯ ಬೆಳೆಯುವದು ಒಳ್ಳೆಯದು. ಏಕೆ ಬೆಳೆಯಾಗಿ ಬೆಳೆದು ಕೈತುಂಬ ಆದಾಯಗಳಿಸಬಹುದಾದ ಬೆಳೆಯಿದು ಎನ್ನುವದು ಅವರ ಅನುಭವದ ಮಾತು. ಚೆಂದಪ್ಪರವರ ಪತ್ನಿ ಸಾವಿತ್ರಿ, ಸಹೋದರರಾದ ದ್ಯಾಮಣ್ಣ, ರಾಮಣ್ಣ, ಯಲಗುರಪ್ಪ, ಮಹಾದೇವಪ್ಪ ಹಾಗೂ ಮನೆಯವರೆಲ್ಲರ ಸಹಕಾರವನ್ನು ಸ್ಮರಿಸುತ್ತಾರೆ. ಸಾವಯವ ಗೊಬ್ಬರ ಮಾತ್ರ ಉಪಯೋಗಿಸಿ ಬೆಳೆದ ವೀಳ್ಯದೆಲೆಯ ಘಮ ಘಮ ಹಿತವಾದ ರುಚಿ ಮಾರುಕಟ್ಟೆಯಲ್ಲಿ ಎಲ್ಲಿಲ್ಲದ ಬೇಡಿಕೆಯನ್ನು ಒದಗಿಸಿಕೊಟ್ಟಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9113222483.

■ ಸುರೇಶ ಗುದಗನವರ